ಚಾರಿತ್ರ್ಯದಲ್ಲಿ ಆಧುನಿಕ ಯುಗದ ಸಮಾಜವನ್ನು ಪವಿತ್ರಗೊಳಿಸುವ, ಸುಸಂಸ್ಕೃತ ಗೃಹಿಣಿಯರ ಮತ್ತು ಬ್ರಹ್ಮವಾದಿನಿಯರ ನಿರ್ಮಾಣಕ್ಕೆ ಕಾರಣೀಭೂತವಾದ ಮಹಾಶಕ್ತಿಯ ಆವಿರ್ಭಾವವನ್ನು ಗುರುತಿಸಿದರು. ಭಾರತೀಯ ಸ್ತ್ರೀತ್ವದ ಆದರ್ಶವನ್ನು ಕುರಿತು ಶ್ರೀರಾಮಕೃಷ್ಣರ ಕೊನೆಯ ಮಾತೇ ಶ್ರೀಮಾತೆಯವರು. ಶ್ರೀಮಾತೆಯವರು ಹಳೆಯ ಪರಂಪರೆಯ ಎಲ್ಲ ಉದಾತ್ತ ಮೌಲ್ಯಗಳಾದ ತಪಸ್ಸು, ಆತ್ಮಸಂಯಮ, ಕಷ್ಟಸಹಿಷ್ಣುತೆ, ಸ್ಥಿತಪ್ರಜ್ಞತೆಗಳ ಜೊತೆಜೊತೆಯಲ್ಲಿ, ಹೊಸ ಪರಂಪರೆಯ ಮೌಲ್ಯಗಳಾದ ವ್ಯವಹಾರಪ್ರಜ್ಞೆ, ವಿಶ್ವವನ್ನು ತಬ್ಬುವ ಉದಾರ ದೃಷ್ಟಿ, ಸ್ವತಂತ್ರ ಮನೋವೃತ್ತಿ, ಕಾರ್ಯಪಟುತ್ವ ಇತ್ಯಾದಿಗಳನ್ನು ತಮ್ಮ ಆದರ್ಶಪೂರ್ಣ ಜೀವನದಲ್ಲಿ ಸಮನ್ವಯಗೊಳಿಸಿ ಬದುಕಿ ತೋರಿಸಿದರು. ಅತ್ಯಂತ ಸಂಪ್ರದಾಯಬದ್ಧ ಜೀವನವನ್ನು ನಡೆಸುತ್ತಿದ್ದ ಶ್ರೀಮಾತೆಯವರು, ತಮ್ಮ ಬಳಿಬಂದ ಮೂವರು ಪಾಶ್ಚಾತ್ಯ ಮಹಿಳೆಯರನ್ನು – ಸುತ್ತಮುತ್ತಲ ಮಹಿಳೆಯರ ಕೆಂಗಣ್ಣನ್ನೂ ಲೆಕ್ಕಿಸದೆ – ಅತ್ಯಂತ ಸಹಜವಾಗಿ 'ನನ್ನ ಮಗು' ಎಂದು ಪರಮ ವಾತ್ಸಲ್ಯದಿಂದ ಸ್ವೀಕರಿಸಿದರಲ್ಲ! ಆ ದೃಶ್ಯದಲ್ಲಿ ಸ್ವಾಮೀಜಿ ಆದರ್ಶ ಭಾರತೀಯ ಸ್ತ್ರೀಯನ್ನು ಕಂಡರು. ಅದೇ ತಾಯಿ ಶಾರದೆಯನ್ನು ಶ್ರೀರಾಮಕೃಷ್ಣರು ಮಹಾಕಾಳಿಯಾಗಿ, ಆದ್ಯಾಶಕ್ತಿಯಾಗಿ, ತಾಯಿಯಾಗಿ ಎಚ್ಚರಗೊಳಿಸಿದರಲ್ಲವೆ? ಅದೇ ಮಹಾಶಕ್ತಿಯನ್ನು ಆದ್ಯಾಶಕ್ತಿಯೆಂದು, ಜೀವ ಚೇತನಶಕ್ತಿಯೆಂದು ಉಪನಿಷತ್ತುಗಳು ಸ್ತುತಿಸಿರಲಿಲ್ಲವೆ? ಅದೇ ಜಗಜ್ಜನನಿ, ಅವತಾರಿಣಿ ಶ್ರೀಶಾರದಾದೇವಿಯವರನ್ನು ಕೇಂದ್ರವಾಗಿಸಿಕೊಂಡು ಭವಿಷ್ಯ ಭಾರತದ ಮಹಿಳೆಯರು ತಮ್ಮ ಜೀವನವನ್ನು ರೂಪಿಸಿಕೊಳ್ಳುವಂತಾಗಬೇಕು. ಅದಕ್ಕಾಗಿ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿನ ಉದ್ಧಾರವಿಲ್ಲ. ಶ್ರೀಮಾತೆಯವರು ಆ ಅದ್ಭುತವಾದ ಆದ್ಯಾಶಕ್ತಿಯನ್ನು ಜಾಗೃತಗೊಳಿಸಲೆಂದೇ ಅವತರಿಸಿದ್ದಾರೆ."

### ಶಿಕ್ಷಣ : ಏಕಮಾತ್ರ ಪರಿಹಾರ

ಅಮೆರಿಕ ಮತ್ತು ಯುರೋಪಿನಲ್ಲಿ ವ್ಯಾಪಕವಾಗಿ ಸಂಚರಿಸಿದ ಸ್ವಾಮೀಜಿ, ಇತರ ರಾಷ್ಟ್ರಗಳಿಗಿಂತ ನಮ್ಮ ರಾಷ್ಟ್ರವು ಇಷ್ಟು ಹಿಂದುಳಿದಿರಲು ಕಾರಣ ವಿದ್ಯಾಭ್ಯಾಸದ ಕೊರತೆ ಎಂದು ಕಂಡುಕೊಂಡರು. ಶಿಕ್ಷಣ, ಶಿಕ್ಷಣ – ಇದೇ ದೇಶದ ಸರ್ವಾಂಗೀಣ ಪ್ರಗತಿಗೆ ಏಕಮಾತ್ರ ಪರಿಹಾರ ಎಂದು ಗುರುತಿಸಿದರು. ಶಿಕ್ಷಣದಿಂದ ಲಭಿಸುವಂಥ ಜ್ಞಾನದ ಬೆಳಕಿನಿಂದ ಭಾರತೀಯ ಸ್ತ್ರೀ ವಂಚಿತಳಾಗಬಾರದು ಎಂಬುದರ ಕುರಿತು ಅವರಿಗೆ ವಿಶೇಷ ಕಾಳಜಿಯಿದ್ದಿತು. ಅಜ್ಞಾನದ ಕತ್ತಲೆಯಿಂದಾಗಿಯೇ ಅವಳು ಭೀತಿ, ಮೌಢ್ಯತೆ ಮತ್ತು ಅಲ್ಪಬುದ್ಧಿಯ ಸಂಕುಚಿತತೆಯಿಂದ ತೊಳಲುತ್ತಿದ್ದಾಳೆ. ಆದ್ದರಿಂದ ಶಿಕ್ಷಣದಿಂದ ಮಾತ್ರ ಅವಳ ಉದ್ಧಾರ ಸಾಧ್ಯ. ಯಾವ ಬಗೆಯ ಶಿಕ್ಷಣ? ಸ್ವಾಮೀಜಿಯವರು ಉಪಯೋಗಿಸುವ ಶಬ್ದಗಳು ಇವು: "ಚಾರಿತ್ರ್ಯನಿರ್ಮಾಣಕರವಾದ, ಮನಶ್ಶಕ್ತಿಯನ್ನು ಹೆಚ್ಚಿಸುವಂತಹ, ಬುದ್ಧಿಯನ್ನು ವಿಶಾಲಗೊಳಿಸುವಂತಹ ಮತ್ತು ವ್ಯಕ್ತಿ ತನ್ನ ಕಾಲಿನ ಮೇಲೆ ತಾನು ನಿಲ್ಲಲು ನೆರವಾಗುವಂತಹ ಶಿಕ್ಷಣ; ಧರ್ಮಪ್ರಜ್ಞೆಯನ್ನು ಕೇಂದ್ರವಾಗಿ ಇಟ್ಟುಕೊಂಡಿರುವ ಶಿಕ್ಷಣ; ನಮ್ಮ ರಾಷ್ಟ್ರೀಯ ಆದರ್ಶಗಳನ್ನು ಪ್ರತಿನಿಧಿಸುವಂತಹ ಶಿಕ್ಷಣ; ಯಾವ ಶಿಕ್ಷಣ ವ್ಯವಹಾರ ಕೌಶಲ್ಯ, ಪಾಶ್ಚಾತ್ಯ ವಿಜ್ಞಾನ ಮತ್ತು ಸಂಘಟನಾ ಸಾಮರ್ಥ್ಯಗಳನ್ನು ಕಲಿಸಿಕೊಡುವುದರೊಂದಿಗೆ ಬ್ರಹ್ಮಚರ್ಯ, ಆತ್ಮಸಂಯಮ ಮತ್ತು ಪವಿತ್ರತೆಯನ್ನು ಕಲಿಸಿಕೊಡುತ್ತದೆಯೋ ಅಂತಹ ಶಿಕ್ಷಣ."

ಈ ಬಗೆಯ ಶಿಕ್ಷಣವನ್ನು ನೀಡುವುದರಿಂದ ಮಾತ್ರ ಭಾರತೀಯ ಮಹಿಳೆಯಲ್ಲಿ ಅಂತರ್ಗತವಾಗಿರುವ ಸೀತೆ, ಸಾವಿತ್ರಿ, ಸತಿ ಎಚ್ಚರಗೊಳ್ಳುತ್ತಾಳೆ. ನಮಗೆ ಆಧುನಿಕ ಶಿಕ್ಷಣ ಬೇಕು, ಆದರೆ ಪಾವಿತ್ರ್ಯದ ಬೆಲೆತೆತ್ತು ಅಲ್ಲ. ಇದು ಸ್ವಾಮೀಜಿಯವರು ನೀಡುವ ದೊಡ್ಡ ಎಚ್ಚರಿಕೆ. ಈ ಮಹೋದ್ದೇಶವನ್ನು ಮನಸ್ಸಿನಲ್ಲಿರಿಸಿಕೊಂಡೇ ಸ್ವಾಮೀಜಿ, ಭಗಿನಿ ನಿವೇದಿತಾಳನ್ನು ಭಾರತೀಯ ಮಹಿಳೆಯರಿಗೆ ಶಿಕ್ಷಣ ನೀಡುವ ಮಹತ್ಕಾರ್ಯದಲ್ಲಿ ತೊಡಗಿಸಿದರು. ನವೆಂಬರ್ ೧೪, ೧೮೯೮ ರಂದು, ಶ್ರೀಮಾತೆಯವರ ಶುಭ ಆಶೀರ್ವಾದದಿಂದ ತೆರೆಯಲ್ಪಟ್ಟ ನಿವೇದಿತಾ ಶಾಲೆಯು ಇಂದಿಗೂ ಸ್ವಾಮಿ ವಿವೇಕಾನಂದರ ಕಲ್ಪನೆಯ 'ಆದರ್ಶ ಶಿಕ್ಷಣ' ವನ್ನು ಭಾರತೀಯ ಮಹಿಳೆಯರಿಗೆ ತಲುಪಿಸುವ ಮಹತ್ಕಾರ್ಯವನ್ನು ಮಾಡುತ್ತಿದೆ. ಸ್ವಾಮೀಜಿಯವರು ಕೊಲ್ಕತಾದಲ್ಲಿದ್ದಾಗ ಮಹಿಳೆಯರ "ಮಹಾಕಾಳಿ ಪಾಠಶಾಲೆ"ಗೆ ಭೇಟಿಯಿತ್ತಿದ್ದರು. ಅಂದು ಆ ಶಾಲೆಗೆ ಹೋಗಿ ಬರುವಾಗ ದಾರಿಯುದ್ದಕ್ಕೂ, ಭಾರತೀಯ ಮಹಿಳೆಯರ ಶಿಕ್ಷಣದ ಕುರಿತಾದ ವಿಚಾರಗಳ ಜೇನುಗೂಡಾಗಿತ್ತು, ಅವರ ಮನಸ್ಸು. ಸ್ವಾಮೀಜಿ ಆ ಶಾಲೆಯ ಸೇವೆಯನ್ನು ಕೊಂಡಾಡುತ್ತಾರೆ, ಅದರ ಧ್ಯೇಯೋದ್ದೇಶಗಳು ಸರಿಯಾದ ದಿಸೆಯಲ್ಲಿವೆ ಎಂದು ಪ್ರಶಂಸಿಸುತ್ತಾರೆ.

### ಭಾರತೀಯ ಕುಟುಂಬದಲ್ಲಿ ತಾಯಿ

ಭಾರತೀಯ ಮಹಿಳೆ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಮುಂಬರುವ ಸಾಮರ್ಥ್ಯವುಳ್ಳವಳು. ಅವಳು ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರೂ ಅದರಲ್ಲಿ ಗುರಿ ತಲುಪುವುದು ನಿಶ್ಚಿತ. ಆದರೆ, ಮಾತೃತ್ವದಲ್ಲಿ ಮಾತ್ರವೇ ಆಕೆಯ ಪರಿಪೂರ್ಣತೆಯಿದೆ. ಭಾರತೀಯ ನಾರಿಯ ಪ್ರಥಮ ಆದರ್ಶ ತಾಯಿ; ಅನಂತರ ಉಳಿದೆಲ್ಲ ಆದರ್ಶಗಳು ಬರುತ್ತವೆ. 'ತಾಯಿ' ಎಂದು ಹೇಳಿದಾಗ ತ್ಯಾಗ, ಲಜ್ಜೆ, ಸಹನೆ, ಪ್ರೇಮ, ಕಷ್ಟಸಹಿಷ್ಣುತೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಪವಿತ್ರತೆ ಇವುಗಳೇ ಮುಖ್ಯವಾಗುತ್ತವೆ, ಸೀತೆ, ಸಾವಿತ್ರಿ, ಸತಿಯ ಹಾಗೆ. ಸ್ವಾಮೀಜಿ ಹೇಳುತ್ತಾರೆ, "ಪಾಶ್ಚಾತ್ಯ ಮಹಿಳೆಯರ ಆದರ್ಶ ಪತ್ನಿ. ಆದರೆ ಪೌರಸ್ತ್ಯರ ಆದರ್ಶ, ಭಾರತೀಯ ಮಹಿಳೆಯರ ವಿಶೇಷ, ಅವರ ಜೀವನಾದರ್ಶವಾದ ತಾಯಿತನ...... ತಾಯಿ ಭಾರತೀಯ ಕುಟುಂಬದಲ್ಲಿನ ದೇವತೆ. ನಾವು ಜಗತ್ತಿನಲ್ಲಿ ಕಾಣುವಂತಹ ನಿಜವಾದ ಪ್ರೇಮ, ನಿಸ್ವಾರ್ಥ ಪ್ರೇಮ ಪರಮಕಷ್ಟಸಹಿಷ್ಣುತೆ ತಾಯಿಯಲ್ಲಿದೆ. ನಾವು ತಾಯಿಯಲ್ಲಿ ಕಾಣುವ ಪ್ರೇಮದೊಂದಿಗಲ್ಲದೆ ಇನ್ನಾವುದರೊಂದಿಗೆ ಭಗವತ್ಪ್ರೇಮವನ್ನು ಹೋಲಿಕೆ ನೀಡಲು ಸಾಧ್ಯ?" ಇನ್ನೊಂದೆಡೆ ಸ್ವಾಮೀಜಿ ಹೀಗೆ ಹೇಳುತ್ತಾರೆ, "ಪ್ರತಿಯೊಬ್ಬ ಅವತಾರಪುರುಷನೂ ಜಗಜ್ಜನನಿಯನ್ನು ಪೂಜಿಸಿಯೇ ಲೋಕ ಮಂಗಳ ಶಕ್ತಿಯನ್ನು ಪಡೆದಿರುವುದು. ಜಗನ್ಮಾತೆಯ ಒಂದು ಅಂಶವನ್ನಾದರೂ ತನ್ನ ತಾಯಿಯಲ್ಲಿ ಕಂಡು ಪೂಜಿಸಿದರೆ ಅಂಥ ವ್ಯಕ್ತಿ ಮಹಿಮಾನ್ವಿತನಾಗುತ್ತಾನೆ."

ಇಂದು ನಾವು ಜೀವನದ ಹಲವು ಕ್ಷೇತ್ರಗಳಲ್ಲಿ ಗಮನಿಸುತ್ತಿರುವಂತೆ ಭಾರತೀಯ ಮಹಿಳೆ ಅಧಿಕಾರ, ಸ್ಥಾನಮಾನ, ಹಣದ ಹಿಂದೆ ಹೋಗುತ್ತ ತನ್ನ ತಾಯಿತನವನ್ನು ಕಡೆಗಣಿಸಿದರೆ, ಅದು ಅವಳಿಗೂ ದೇಶಕ್ಕೂ ಹೇಳಲಾಗದ ನಷ್ಟವನ್ನುಂಟುಮಾಡುತ್ತದೆ. ಮೊದಲು ಅವಳು ತಾಯಿಯಾಗಿ ಜ್ಞಾನ, ಸಂಸ್ಕೃತಿ, ತ್ಯಾಗ, ಭಕ್ತಿ, ಶಕ್ತಿಗಳನ್ನು ತಾನು ಮೈಗೂಡಿಸಿಕೊಂಡು, ತನ್ನ ಮಕ್ಕಳಿಗೂ ಕಲಿಸಬೇಕು. ಮೇಲಾಗಿ ತಾಯಿಯಾಗಿ ಅವಳು ತನ್ನ ಮನೆ, ತನ್ನ ಮಕ್ಕಳೆಂಬ ಮಿತಿಯನ್ನು ದಾಟಿ ಇಡೀ ಸಮಾಜವನ್ನು, ದೇಶವನ್ನು ತನ್ನ ಕುಟುಂಬ, ತನ್ನ ಸಂತಾನವೆಂಬ ಮಾತೃಭಾವದಿಂದ ಕಾಣಲು ಸಾಧ್ಯವಾದರೆ, ಯಾವುದೇ ಪೊಲೀಸ್ ಪಡೆ ಅಧಿಕಾರಿವರ್ಗದ ನಿಯಂತ್ರಣವಿಲ್ಲದೆ, ನಮ್ಮ ದೇಶ ಬಹುಬೇಗ ಅಭಿವೃದ್ಧಿಗೆ ಬರುವುದು ನಿಶ್ಚಿತ. ತನ್ಮೂಲಕ ಮಾತ್ರ ನಮ್ಮ ರಾಷ್ಟ್ರದ ಗತಿ ಬದಲಾಗ ಬಲ್ಲದು. ಭಾರತೀಯ ಮಹಿಳೆ ಆದರ್ಶ ತಾಯಿಯಾಗಿ ಸುಶ್ರೇಷ್ಠ ಸಂತಾನವನ್ನು ನಮ್ಮ ದೇಶಕ್ಕೆ, ವಿಶ್ವಕ್ಕೆ ನೀಡುವ ತನ್ನ ಗುರುತರ ಜವಾಬ್ದಾರಿಯನ್ನು ಇಂದು ನಿಭಾಯಿಸುತ್ತಿದ್ದಾಳೆಯೇ ಎಂಬುದನ್ನು ವಿಚಾರ ಮಾಡಬೇಕು. ಛತ್ರಪತಿ ಶಿವಾಜಿಯ ಹಿಂದೆ ಇದ್ದ ಶಕ್ತಿ ತಾಯಿ ಜೀಜಾಬಾಯಿಯೇ ಅಲ್ಲವೆ? ವಿವೇಕಾನಂದರ ಹಿಂದೆ ಇದ್ದ ಶಕ್ತಿ ತಾಯಿ ಭುವನೇಶ್ವರೀದೇವಿಯೇ ಅಲ್ಲವೇ?

### ಬ್ರಹ್ಮಜ್ಞಾನಿಗಳು ಬೇಕಾಗಿದ್ದಾರೆ

ಆತ್ಮನಲ್ಲಿ ಸ್ತ್ರೀ–ಪುರುಷ ಲಿಂಗಭೇದವಿಲ್ಲ. ಮನಸ್ಸು ಸೂಕ್ಷ್ಮವಾದಷ್ಟೂ ಅಂತರ್ಮುಖಿಯಾದಷ್ಟೂ ಈ ಭೇದಗಳು ಅಳಿಸಿಹೋಗುತ್ತವೆ. ಆದ್ದರಿಂದ ಪುರುಷನೊಬ್ಬ ಬ್ರಹ್ಮಜ್ಞಾನವನ್ನು ಪಡೆಯಬಲ್ಲನಾದರೆ ಮಹಿಳೆಯಿಂದ ಏಕೆ ಪಡೆಯಲಾಗದು? ಖಂಡಿತ ಸಾಧ್ಯ. ಒಬ್ಬ ಮಹಿಳೆ ಬ್ರಹ್ಮಜ್ಞಾನಿಯಾದರೆ ಅವಳ ವ್ಯಕ್ತಿತ್ವದ ಪ್ರಭಾವದಿಂದ ಸಾವಿರಾರು ಮಹಿಳೆಯರಿಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ಸಿಗುವಂತಾಗುತ್ತದೆ, ತನ್ಮೂಲಕ ರಾಷ್ಟ್ರ ಪ್ರಗತಿ ಪರವಾಗುತ್ತದೆ.

ಸೋದರಿ ಕ್ರಿಸ್ಟೀನಾ ಹೀಗೆ ಬರೆಯುತ್ತಾಳೆ: "ಒಬ್ಬ ಮಹಿಳೆಯ ಪೂರ್ಣತೆಯಿರುವುದು ಪರಿಪೂರ್ಣ ಸ್ವಾತಂತ್ರ್ಯದಲ್ಲಿ. ಯಾವುದದು ಪರಿಪೂರ್ಣ ಸ್ವಾತಂತ್ರ್ಯ? **'ದೈಹಿಕ ಹಾಗೂ ಮಾನಸಿಕ ತೃಷ್ಣೆಗಳಿಂದ ಪಾರಾದ ಮನಃಸ್ಥಿತಿ, ದೈವತ್ವದ ಅರಿವಿನಲ್ಲಿ ನೆಲೆನಿಂತ ಮನಃಸ್ಥಿತಿ.'** ಇದರ ಅರ್ಥ ಸ್ತ್ರೀಯೊಬ್ಬಳು ಬ್ರಹ್ಮಜ್ಞಾನಿಯಾಗಿರಬೇಕಾಗುತ್ತದೆ. ಅದಕ್ಕಾಗಿ ಸ್ವಾಮೀಜಿಯವರು ಹೇಳಿದರು, "ನಮ್ಮ ತಾಯಿನಾಡಿನ ಹಿತಕ್ಕಾಗಿ, ತಾಯಿನಾಡಿನ ಒಳಿತಿಗಾಗಿ ಕೆಲವು ಹುಡುಗಿಯರಾದರೂ ನೈಷ್ಠಿಕ ಬ್ರಹ್ಮಚಾರಿಣಿಯರಾಗಬೇಕು. ತಮ್ಮ ಜೀವನದ ಉದಾ ಹರಣೆಯಿಂದ ಅವರು ರಾಷ್ಟ್ರೀಯ ಆದರ್ಶವನ್ನು ಜನರೆದುರು ಎತ್ತಿ ಹಿಡಿಯುವಂತಾಗಬೇಕು." ಸ್ವಾಮೀಜಿಯವರ ಪ್ರಕಾರ ೫೦೦ ಸಾಧುಗಳು ೫೦ ವರ್ಷಗಳಲ್ಲಿ ಮಾಡಬಹುದಾದುದನ್ನು, ೫೦೦ ಸಂನ್ಯಾಸಿನಿಯರು ಕೆಲವೇ ವಾರಗಳಲ್ಲಿ ಮಾಡಿತೋರಿಸಬಲ್ಲರು! ಆದ್ದರಿಂದ ನಮಗಿಂದು ತ್ಯಾಗೀ ಯುವತಿಯರು ಬೇಕಾಗಿದ್ದಾರೆ! ಬ್ರಹ್ಮಜ್ಞಾನಿಗಳು ಬೇಕಾಗಿದ್ದಾರೆ!

ಒಮ್ಮೆ ಶಿಷ್ಯ ಶರಚ್ಚಂದ್ರ ಸ್ವಾಮೀಜಿಯವರ ಬಳಿ, "ಗಾರ್ಗಿ, ಖಾನಾ ಅಥವಾ ಲೀಲಾವತಿಯಂತಹ ಗುಣಶಾಲಿ ಮಹಿಳೆಯರನ್ನು ಮತ್ತೆ ಈ ದೇಶದಲ್ಲಿ ಕಾಣುವುದು ಹೇಗೆ?" ಎಂದು ಪ್ರಶ್ನಿಸಿದಾಗ ಸ್ವಾಮೀಜಿಯವರು ಹೀಗೆ ಉತ್ತರಿಸುತ್ತಾರೆ: "ಭಾರತದಂತಹ ಪುಣ್ಯಭೂಮಿಯಲ್ಲಿ, ಸೀತೆ–ಸಾವಿತ್ರಿಯರು ಜನಿಸಿದ ನಾಡಿನಲ್ಲಿ ಅಂತಹ ಚಾರಿತ್ರ್ಯಗಳಿಗೆ ಈಗಲೂ ಅಭಾವವಿಲ್ಲ. ಜಗತ್ತಿನಲ್ಲೆಲ್ಲೂ ಕಾಣದಂತಹ ಪ್ರೇಮ, ವಾತ್ಸಲ್ಯ, ದಯೆ, ತೃಪ್ತಿ ಭಾರತೀಯ ಸ್ತ್ರೀಯ ರಲ್ಲಿ ಇವತ್ತೂ ಮನೆಮಾಡಿದೆ."

ಜೀವನದ ಪರಮಗುರಿ ಆತ್ಮಮೋಕ್ಷ ಅಥವಾ ಪರಮ ಸ್ವಾತಂತ್ರ್ಯವನ್ನು ಗಳಿಸುವುದು. ಅದಕ್ಕಾಗಿ ಒಂದು ಆದರ್ಶ ಸಂನ್ಯಾಸಿನಿಯರ ಮಠ ಸ್ಥಾಪನೆಯಾಗಬೇಕೆಂಬುದು ಸ್ವಾಮೀಜಿ ಯವರ ಸಂಕಲ್ಪವಾಗಿತ್ತು. ಆ ಮಠದಲ್ಲಿ ಅವಿವಾಹಿತ ಮಹಿಳೆಯರು ಸಂನ್ಯಾಸಿನಿಯರಾಗಿ ಆಧ್ಯಾತ್ಮಿಕ ಸಾಧನೆಯ ಜೀವನವನ್ನು ನಡೆಸಬೇಕು. ಆ ಮಠವನ್ನು ಮಹಿಳೆಯರೇ ನಡೆಸಿಕೊಂಡು ಹೋಗಬೇಕು. ಆ ಮಠಕ್ಕೆ ಸೇರಿದ ಹುಡುಗಿಯರ ಒಂದು ಶಾಲೆ ಯಿರಬೇಕು. ಅಲ್ಲಿ ಧಾರ್ಮಿಕ ಗ್ರಂಥಗಳು, ಸಾಹಿತ್ಯ, ಸಂಸ್ಕೃತ ವ್ಯಾಕರಣ ಮತ್ತು ಕರಕುಶಲ ಕಲೆಗಳನ್ನು ಕಲಿಸಬೇಕು. ಜಪ ಪೂಜೆ ಧ್ಯಾನ ಅವರ ಶಿಕ್ಷಣದ ಅಭಿನ್ನ ಅಂಗವಾಗಬೇಕು. ಅಲ್ಲಿ ೫–೬ ವರ್ಷ ತರಬೇತಿಯನ್ನು ಪಡೆದ ಹುಡುಗಿಯರು ಗೃಹಿಣಿಯರಾಗಬಹುದು ಅಥವಾ ತ್ಯಾಗಿಗಳಾಗಿ ಮುಂದುವರಿಯಬಹುದು. ಅಂತಹ ತ್ಯಾಗಿ ಸ್ತ್ರೀಯರೇ ಮುಂದೆ ಸಂನ್ಯಾಸಿನಿಯರಾಗಿ ಬೇರೆ ಬೇರೆ ಊರುಗಳಿಗೆ ಹೋಗಿ, ಇದೇ ಬಗೆಯಲ್ಲಿ ಮಠದ ಶಾಖೆಗಳನ್ನು ತೆರೆಯಬೇಕು. ಆ ಮೂಲಕ ಮಹಿಳೆಯರಲ್ಲಿ ಜಾಗೃತಿಯನ್ನು ಉಂಟುಮಾಡಬೇಕು. ಭಾರತೀಯ ಮಹಿಳೆ ಈ ರೀತಿ ತನ್ನ ಜೀವನವನ್ನು ರೂಪಿಸಿಕೊಳ್ಳುವುದಾದರೆ, ಇನ್ನೊಮ್ಮೆ ಸೀತೆ, ಸಾವಿತ್ರಿ, ಗಾರ್ಗಿಯರಂತಹ ಚಾರಿತ್ರ್ಯಯುಕ್ತ ಸ್ತ್ರೀಯರು ಉದಿಸಿ ಬರುವುದು ನಿಶ್ಚಿತ. ಶ್ರೀಶಾರದಾ ಮಠದ ಸ್ಥಾಪನೆಯೊಂದಿಗೆ ಮತ್ತು ಅದು ದೇಶವಿದೇಶಗಳಲ್ಲಿ ತನ್ನ ಶಾಖೆಗಳನ್ನು ವಿಸ್ತರಿಸುವುದರೊಂದಿಗೆ ಸ್ವಾಮೀಜಿಯವರ ಈ ಪವಿತ್ರ ಸಂಕಲ್ಪ ಕಾರ್ಯರೂಪಕ್ಕೆ ಬರುತ್ತಲಿದೆ.

### ಉಪಸಂಹಾರ

"ಯಾವ ರಾಷ್ಟ್ರ ಸೀತೆಯಂಥ ಹಿರಿಯ ಚಾರಿತ್ರ್ಯಯುಕ್ತ ಮಹಿಳೆಯನ್ನು ಮೂಡಿಸಿ ತೋರಿಸಿತೋ, ಅದು ಕೇವಲ ಕಲ್ಪನೆಯೇ ಆಗಿದ್ದರೂ ಸರಿ, ಮಹಿಳೆಯರ ಕುರಿತಾಗಿ ಆ ಬಗೆಯ ಗೌರವವನ್ನು ಉಳ್ಳ ರಾಷ್ಟ್ರವು ಭೂಮಿಯಲ್ಲಿ ಅಸದೃಶವಾದುದೇ ಸರಿ" ಎಂದು ಸ್ವಾಮೀಜಿ ಒಂದು ಕಡೆ ಹೇಳುತ್ತಾರೆ. ಅಂತಹ ಅದ್ಭುತ ಕಲ್ಪನೆಯ ಸಾಕಾರರೂಪವಾದ ಭಾರತೀಯ ಮಹಿಳೆ ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧಾ, ಧೃತಿ, ಕ್ಷಮಾ – ಈ ಗುಣಗಳಿಂದ ಕೂಡಿ ಜೀವಂತ ದುರ್ಗೆಯಾಗಿ ತನ್ನ ಮನೆಯನ್ನೂ, ಮನೆಯವರ ಮನವನ್ನೂ ಬೆಳಗುವ ಶಕ್ತಿಸ್ವರೂಪಿಣಿಯಾಗಬೇಕು. ಆ ದಿಸೆಯಲ್ಲಿ ನಮ್ಮ ಶಿಕ್ಷಣ–ಧರ್ಮ–ಸಂಸ್ಕೃತಿ ಅವಳಿಗೆ ನೆರವಾಗಬೇಕು. ಸ್ವಾಮಿ ವಿವೇಕಾನಂದರ ಓಜಸ್ವಿ ಚಿಂತನೆಗಳು ಹೀಗೆ ಭಾರತೀಯ ಮಹಿಳೆಯರಲ್ಲಿ ಆತ್ಮಶ್ರದ್ಧೆಯನ್ನು ತುಂಬಿ, ಅಜ್ಞಾನ–ಜಡತೆಯನ್ನು ಹೋಗಲಾಡಿಸಿ, ಹೃದಯವೈಶಾಲ್ಯ–ಭಾವವೈಶಾಲ್ಯದಿಂದೊಡಗೂಡಿದ ಚಾರಿತ್ರ್ಯಬಲವರ್ಧನೆಯನ್ನು ಮಾಡಬಲ್ಲವು.



# ವಿವೇಕಾನಂದರು

◆ ಡಾ.ಜಿ.ಎಸ್. ಶಿವರುದ್ರಪ್ಪ

ಸ್ವಾಮಿ ವಿವೇಕಾನಂದರು ಉಪನಿಷತ್ತುಗಳಲ್ಲಿ ವ್ಯಕ್ತವಾಗಿರುವ ಪ್ರಖರ ವೈಚಾರಿಕತೆಯ ಮೂರ್ತರೂಪರೇ ಆಗಿದ್ದರು. ಬಾಲ್ಯದಿಂದಲೇ ತಮ್ಮ ಆಚಾರವಿಚಾರಗಳಲ್ಲಿ ಚಿಂತನಶೀಲತೆಯನ್ನೂ, ವಾಸ್ತವಿಕ ದೃಷ್ಟಿಯನ್ನೂ ಬೆಳೆಸಿಕೊಂಡು ಬಂದ ಅವರ ಚಿಂತನೆಗಳು ಕೂಡ ವೈಚಾರಿಕತೆಯ ಅಗ್ನಿಯಲ್ಲಿ ಪಾಟವಗೊಂಡ ಚಿನ್ನದ ಗಟ್ಟಿಗಳು ಎಂದರೆ ತಪ್ಪಾಗಲಾರದು. ವೈಚಾರಿಕತೆಯ ಹಿನ್ನೆಲೆಯಲ್ಲಿ ಸ್ವಾಮೀಜಿಯವರ ಜೀವನ ಸಂದೇಶಗಳ ಸಮಗ್ರ ಸಮೀಕ್ಷೆಯನ್ನು ನಾವು ಈ ಪ್ರಬುದ್ಧ ಲೇಖನದಲ್ಲಿ ಕಾಣುತ್ತೇವೆ. ಲೇಖಕರಾದ ಡಾ. ಜಿ.ಎಸ್. ಶಿವರುದ್ರಪ್ಪನವರು ಕನ್ನಡನಾಡು ಕಂಡ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ಯೌವನದಲ್ಲಿಯೇ 'ಶ್ರೀರಾಮಕೃಷ್ಣ ವಚನವೇದ'ದ ಹಾಡುಗಳನ್ನು ಸಮರ್ಥವಾಗಿ ಕನ್ನಡಕ್ಕೆ ಭಾಷಾಂತರಿಸಿದ ಇವರು ಅನಂತರ ದಿನಗಳಲ್ಲಿ ಸುಪ್ರಸಿದ್ಧ ಕವಿಪುಂಗವರಾಗಿ ಬಹು ಎತ್ತರಕ್ಕೆ ಏರಿನಿಂತರು. ಅನೇಕ ಪ್ರಶಸ್ತಿಗಳನ್ನು ಪಡೆದ ಇವರು ಇತ್ತೀಚಿಗೆ 'ರಾಷ್ಟ್ರಕವಿ' ಎಂಬ ಪುರಸ್ಕಾರಕ್ಕೂ ಭಾಜನರಾಗಿದ್ದಾರೆ.

ಸ್ವಾಮಿ ವಿವೇಕಾನಂದರ ಬದುಕಿನಲ್ಲಿ ಅನೇಕ ಮಹತ್ವದ ಘಟನೆಗಳಿವೆ. ಅವುಗಳಲ್ಲಿ ತುಂಬ ನಿರ್ಣಾಯಕವಾದ ಘಟನೆ ಎಂದರೆ, ಅವರು ಮಹಾಪರಿವ್ರಾಜಕರಾಗಿ ಈ ದೇಶವನ್ನೆಲ್ಲ ಸುತ್ತಿ, ೧೮೯೩ ರಲ್ಲಿ – ತಮ್ಮ ೩೦ನೆಯ ವಯಸ್ಸಿನಲ್ಲಿ – ಕನ್ಯಾಕುಮಾರಿಯ ನಡುಗಡ್ಡೆಯಲ್ಲಿ ಕುಳಿತು ಭಾರತದ ವರ್ತಮಾನ ಹಾಗೂ ಭವಿಷ್ಯಗಳನ್ನು ಕುರಿತು ನಡೆಸಿದ ಧ್ಯಾನ–ಚಿಂತನೆ.

ವಿವೇಕಾನಂದರು ಆ ನಡುಗಡ್ಡೆಯಲ್ಲಿ ಕುಳಿತು ದೇವರ ಧ್ಯಾನ ಮಾಡುವುದಕ್ಕೆ ಅವರಿಗೆ ಅಂತಹ ಚಿತ್ತಸ್ಥಿತಿ ಹಾಗೂ ಪರಿಸರ ಎರಡೂ ಇದ್ದವು. ಹಾಗೆ ಮಾಡುವುದು ತೀರಾ ಸಹಜವಾಗಿತ್ತು. ಆದರೆ ಹಾಗೆ ಮಾಡದೆ ಈ ದೇಶದ ಅವನತಿಯನ್ನು ಕುರಿತು, ಲಕ್ಷಾಂತರ ಭಾರತೀಯರು ಅಜ್ಞಾನ, ದಾರಿದ್ರ್ಯ, ಮೂಢನಂಬಿಕೆಗಳಲ್ಲಿ ಮುಳುಗಿರುವುದನ್ನು ಕುರಿತು, ಅವರ ಉದ್ಧಾರವನ್ನು ಕುರಿತು ಚಿಂತನೆ ಮಾಡಿದರು. ಪರಮಾನುಭವವನ್ನು ಪಡೆದ ಸರ್ವಸಂಗ ಪರಿತ್ಯಾಗಿಯಾದ ಸಂನ್ಯಾಸಿಯೊಬ್ಬನ ಧ್ಯಾನದ ವಸ್ತು 'ದೇವ'ರಾಗದೆ 'ಮನುಷ್ಯನೇ' ಆದದ್ದು ಜಗತ್ತಿನ ಧಾರ್ಮಿಕ ಇತಿಹಾಸಗಳಲ್ಲಿ ಬಹುಶಃ ಇದೇ ಮೊದಲು.

ಸ್ವಾಮಿ ವಿವೇಕಾನಂದರ ವೈಚಾರಿಕತೆಯನ್ನು ಕುರಿತು ಯೋಚನೆ ಮಾಡುವಾಗ ಈ ಘಟನೆ ಮಹತ್ವದ್ದು. ಈ ಹಂತದಲ್ಲಿ ವಿವೇಕಾನಂದರ ವಿವೇಚನೆಗೆ ಒಳಗಾದದ್ದು, ಪರಮಹಂಸರ ಕೃಪೆಯಿಂದ ಪ್ರಾಪ್ತವಾದ ಆ ಪರಮಾನುಭವದ ಮುಕ್ತಿ ಸಿದ್ಧಿಯ ಸೆಳೆತಕ್ಕೆ ಸಿಕ್ಕಿ, ಅನೇಕ ಸಾಧುಸಂತರ ಹಾಗೆ ಅದರಲ್ಲೇ ಮುಳುಗಿರುವುದೋ ಅಥವಾ ಈ ದುಃಖಭೂಯಿಷ್ಠವಾದ ಜಗತ್ತಿಗಾಗಿ ಅದನ್ನು ವಿನಿಯೋಗಿಸುವುದೋ ಎಂಬ ಸಂಗತಿ. ಈ ವಿವೇಚನೆಯಲ್ಲಿ ಅವರು ಆರಿಸಿಕೊಂಡದ್ದು, ಸಮಷ್ಟಿ ಕಲ್ಯಾಣವನ್ನು ಅಥವಾ ಮಾನವತೆಯ ಶ್ರೇಯಸ್ಸನ್ನು. ವಿವೇಕಾನಂದರ ವೈಚಾರಿಕತೆಯನ್ನು ರೂಪಿಸಿರುವುದು ಮಾನವಕೇಂದ್ರಿತ ಕಾಳಜಿಗಳು. ನಿಜವಾದ ಮನುಷ್ಯನನ್ನು ನಿರ್ಮಾಣ ಮಾಡುವುದು ಹೇಗೆ ಅನ್ನುವುದೇ ವಿವೇಕಾನಂದರ ವೈಚಾರಿಕತೆಯ ಉದ್ದೇಶ.

ಇದು ಯುಗಾವತಾರಿಯಾದ ಶ್ರೀರಾಮಕೃಷ್ಣರ ಉದ್ದೇಶ ಮತ್ತು ಇಚ್ಛೆ ಎರಡೂ ಆಗಿತ್ತು. ಅದನ್ನು ವಿವೇಕಾನಂದರ ಮೂಲಕ ಪರಮಹಂಸರು ನೆರವೇರಿಸಿದರು. ವಿವೇಕಾನಂದರು, ಬೇರೊಂದು ದೃಷ್ಟಿಯಿಂದ ನೋಡಿದರೆ, ರಾಮಕೃಷ್ಣರ ಸಂದೇಶವನ್ನು ಸಾರಲು ನಿಯೋಜಿತರಾದ ಸಮರ್ಥ ಮಾಧ್ಯಮ. ಅಷ್ಟೇ ಅಲ್ಲ, ಅವರು ಶ್ರೀರಾಮಕೃಷ್ಣರ ಸನಾತನ ಸಹಚರ – ಕೃಷ್ಣನಿಗೆ ಅರ್ಜುನನಿದ್ದಂತೆ, ಬುದ್ಧನಿಗೆ ಆನಂದನಂತೆ.

ತಮ್ಮ ಶಿಷ್ಯ ವಿವೇಕಾನಂದರನ್ನು ಅವರು ಒಮ್ಮೆ ಕೇಳಿದರು, "ಏನಪ್ಪ ನರೇನ್, ನಿನಗೇನು ಬೇಕಾಗಿದೆ?" ಎಂದು. ಅದಕ್ಕೆ ನರೇಂದ್ರ ಹೇಳಿದ, "ಗುರುದೇವ, ನಿಮ್ಮಂತೆ ನಾನೂ ಸದಾ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿರಬೇಕೆಂಬುದು ನನ್ನ ಮಹದಾಸೆ." ಆಗ ಪರಮಹಂಸರು, "ಮತ್ತೆ ಮತ್ತೆ ಅದನ್ನೇ ಕೇಳುತ್ತೀಯಲ್ಲ, ನಿನಗೆ ನಾಚಿಕೆಯಾಗದೆ? ಇಷ್ಟು ಕಾಲ ಮಹಾವಟವೃಕ್ಷದ ಹಾಗೆ ಬೆಳೆದಿದ್ದೀಯೆ, ಸಾವಿರಾರು ಜನರಿಗೆ ಶಾಂತಿಯ ನೆರಳನ್ನು ನೀನು ಕೊಡಬೇಕಾಗಿದೆ. ಅದನ್ನು ಬಿಟ್ಟು ಸ್ವಂತ ಮುಕ್ತಿಗಾಗಿ ಬಾಯಿ ಬಾಯಿ ಬಿಡುತ್ತೀಯಲ್ಲ, ಎಂತಹ ಕ್ಷುದ್ರ

# ಮತ್ತು ವೈಚಾರಿಕತೆ





ಆದರ್ಶ ನಿನ್ನದು" ಎಂದರು. ಆದರೂ ಈ ಪ್ರಿಯ ಶಿಷ್ಯನಿಗೆ ಅವನು ಕಾಡಿಬೇಡಿದ ನಿರ್ವಿಕಲ್ಪ ಸಮಾಧಿಯ ಸ್ಥಿತಿಯನ್ನು ಅನುಗ್ರಹಿಸಿದರು. ಅನಂತರ ಹೇಳಿದರು, "ತಾಯಿ ನಿನಗೆಲ್ಲವನ್ನೂ ತೋರಿಸಿದಳಷ್ಟೆ? ಇನ್ನು ಅದಕ್ಕೆ ಬೀಗ ಹಾಕಿದೆ. ಆದರೆ ಬೀಗದ ಕೈ ನನ್ನ ಹತ್ತಿರ ಇದೆ. ನೀನು ಮಾಡಬೇಕಾದ ಕೆಲಸ ಬಹಳವಿದೆ. ಅನಂತರ ನಾನೇ ಬೀಗ ತೆಗೆಯುತ್ತೇನೆ."

ಈ ವಿಷಯದಲ್ಲಿ ಅವರು ಹೇಳುತ್ತಿದ್ದ ದೃಷ್ಟಾಂತ, 'ಹಣ್ಣು ತಿನ್ನುವ ಎರಡು ವಿಧಾನಗಳು.' ಒಬ್ಬ ಬಾಗಿಲು ಹಾಕಿಕೊಂಡು ಹಣ್ಣು ತಿಂದು ಟವಲ್‌ನಿಂದ ಕೈಬಾಯಿ ಒರೆಸಿಕೊಳ್ಳುತ್ತಾನೆ. ಇನ್ನೊಬ್ಬ ಎಲ್ಲರೆದುರಿಗೆ ಹಣ್ಣು ಹೆಚ್ಚಿ ಎಲ್ಲರಿಗೂ ಹಂಚಿ ತಿನ್ನುತ್ತಾನೆ. ವಿವೇಕಾನಂದರು ಈ ಎರಡನೆಯ ವಿಧಾನವನ್ನು ಅನುಸರಿಸಿದವರು.

ವಿವೇಕಾನಂದರು ನಮ್ಮ ದೇಶ ಕಂಡ ಅಸಾಧಾರಣ ವಿಚಾರ ವಂತರು. ಇಡೀ ಭಾರತದ ಹಾಗೂ ಜಗತ್ತಿನ ಅನೇಕ ಸಮಸ್ಯೆ ಗಳನ್ನು ಅವರಷ್ಟು ತಲಸ್ಪರ್ಶಿಯಾಗಿ ಹಾಗೂ ಸಮಗ್ರವಾಗಿ ವಿಚಾರ –ವಿಮರ್ಶೆಗೆ ಒಳಪಡಿಸಿದವರು ಬೇರೆ ಯಾರೂ ಇಲ್ಲ. ಈ ವಿಮರ್ಶನ ಸಾಮರ್ಥ್ಯಕ್ಕೆ ಅವರಿಗೆ ಒದಗಿದ ಪೂರ್ವಸಿದ್ಧತೆಗಳು ಸ್ಥೂಲವಾಗಿ ಐದು ಎಂದು ವಿಭಾಗಿಸಬಹುದು.

**೧. ಅವರು ಪಡೆದ ಇಂಗ್ಲಿಷ್ ಭಾಷೆಯ ಶಿಕ್ಷಣ ಮತ್ತು ಆ ಮೂಲಕ ಮೈಗೂಡಿಸಿಕೊಂಡ ವಿಜ್ಞಾನ, ಕಲೆ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆಗಳು.**

**೨. ಸಂಸ್ಕೃತ ಭಾಷೆಯ ಮೂಲಕ ಅವರು ಪಡೆದುಕೊಂಡ ಭಾರತೀಯ ಅಧ್ಯಾತ್ಮ, ತತ್ತ್ವಜ್ಞಾನ ಇತ್ಯಾದಿಗಳಿಂದ ಪರಿಚಯವಾದ ಸಾಂಸ್ಕೃತಿಕ ಚರಿತ್ರೆ.**

**೩. ಶ್ರೀರಾಮಕೃಷ್ಣರ ಸಾನ್ನಿಧ್ಯದಲ್ಲಿ ಶಿಷ್ಯನಾಗಿ ಆರು ವರ್ಷಗಳ ಕಾಲ ಪಡೆದುಕೊಂಡ ಆಧ್ಯಾತ್ಮಿಕ ಅನುಭವಗಳು ಮತ್ತು ಅಧಿಕಾರ.**

**೪. ಪರಿವ್ರಾಜಕರಾಗಿ ಆರೇಳು ವರ್ಷಗಳ ಕಾಲ ಇಡೀ ಭಾರತ ವನ್ನು ಸಂಚರಿಸಿ ಪಡೆದುಕೊಂಡ ದೇಶದ ಪ್ರತ್ಯಕ್ಷಾನುಭವಗಳು.**

**೫.ಭಾರತದ ಪ್ರಪ್ರಥಮ ಸಾಂಸ್ಕೃತಿಕ ರಾಯಭಾರಿಯಾಗಿ, ಪಶ್ಚಿಮ ದೇಶಗಳಿಗೆ ಹೋಗಿ ಆ ಅನುಭವದ ಬೆಳಕಿನಲ್ಲಿ ಭಾರತವನ್ನು ತೌಲನಿಕ ವಾಗಿ ಪರಿಶೀಲಿಸಿದಾಗ ಅವರಿಗೆ ಆದ ಅನುಭವಗಳು.**

ವಿವೇಕಾನಂದರ ವೈಚಾರಿಕ ಗುಣ, ಅಂದರೆ ಪ್ರತಿಯೊಂದನ್ನೂ ಪರೀಕ್ಷೆ ಮಾಡಿಯೇ ಸ್ವೀಕರಿಸಬೇಕೆನ್ನುವ ಪ್ರವೃತ್ತಿ ಅವರಿಗೆ ಹುಟ್ಟಿನಿಂದಲೇ ಬಂದದ್ದು. ರಾಮಕೃಷ್ಣರನ್ನು ಕಾಣುವ ಮುನ್ನ ನಡೆದ ಮೂರು ನಾಲ್ಕು ಘಟನೆಗಳು ಈ ಸಂಗತಿಯನ್ನು ದೃಢಪಡಿಸುತ್ತವೆ: (ಅ) ನರೇಂದ್ರನ ಲಾಯರ್ ತಂದೆ ಕಕ್ಷಿದಾರರಿಗೆ ಅವರವರ ಜಾತಿಗನುಸಾರವಾದ ಹುಕ್ಕಾಗಳನ್ನು ಇರಿಸಿದ್ದು; ಅವೆಲ್ಲವನ್ನೂ ನರೇಂದ್ರ ಸೇದಿನೋಡಿದ್ದು. (ಆ) ಹರಿಕಥೆ ದಾಸರು ಆಂಜನೇಯನನ್ನು ಹುಡುಕುವುದಾದರೆ ಬಾಳೆಯ ತೋಟದಲ್ಲಿ ಹುಡುಕು ಎಂದು ಹೇಳಿದಾಗ, ನರೇಂದ್ರ ಹಾಗೆಯೇ ಮಾಡಿದ್ದು. (ಇ) ಮನೆಯ ಹಿಂದಿನ ಮುದುಕನ 'ಬ್ರಹ್ಮರಾಕ್ಷಸ' ನನ್ನು ಪರೀಕ್ಷೆ ಮಾಡಿದ್ದು. ಇವೆಲ್ಲಾ ಸಾಮಾನ್ಯ ಘಟನೆಗಳ ಹಿಂದಿರುವ ಚಿಕಿತ್ಸಕ ಪ್ರವೃತ್ತಿಗಳು.

ಮುಂದೆ ಪಾಶ್ಚಾತ್ಯ ಶಿಕ್ಷಣದ ಸಂದರ್ಭದಲ್ಲಿ, ನರೇಂದ್ರನನ್ನು ಮೆಟ್ರೊಪಾಲಿಟನ್ ಶಾಲೆಗೆ ಸೇರಿಸುತ್ತಾರೆ. ಆಗ ಅವನ ಅಧ್ಯಾಪಕರು,"ಇನ್ನುಮೇಲೆ ನೀನು ಇಂಗ್ಲಿಷ್ ಕಲಿಯಬೇಕಾಗುತ್ತದೆ" ಎನ್ನುತ್ತಾರೆ. ಅದಕ್ಕೆ ನರೇಂದ್ರ, "ಅದು ಬೇರೆಯವರ ಭಾಷೆ, ಅದನ್ನೇಕೆ ನಾವು ಕಲಿಯಬೇಕು. ನಾವು ಮೊದಲು ನಮ್ಮ ಮಾತೃ ಭಾಷೆಯನ್ನು ಚೆನ್ನಾಗಿ ಕಲಿಯಬೇಡವೇ" ಅನ್ನುತ್ತಾನೆ. ಅನಂತರ ಆತನನ್ನು ಇಂಗ್ಲಿಷ್ ಕಲಿಯಲು ಬಹಳ ಕಷ್ಟಪಟ್ಟು ಒಪ್ಪಿಸಬೇಕಾಗುತ್ತದೆ.

ನರೇಂದ್ರ ಪಡೆದ ಪಾಶ್ಚಾತ್ಯ ಶಿಕ್ಷಣದಿಂದ ಅವನಲ್ಲಿ ಹೊಸ ಸಂದೇಹಗಳೂ, ಹೊಸ ಪ್ರಶ್ನೆಗಳೂ ಉದ್ಭವಿಸಿದವು. ಇಡೀ ಭಾರತೀಯ ಜೀವನವೇ ಪಾಶ್ಚಾತ್ಯ ವಿಚಾರಗಳಿಂದಾಗಿ ಒಂದು

ಬಗೆಯ ಅಲ್ಲೋಲಕಲ್ಲೋಲಕ್ಕೆ ಒಳಗಾಗಿರುವುದು, ನಮ್ಮ ಸಂಪ್ರದಾಯ, ನಂಬಿಕೆ ಇತ್ಯಾದಿಗಳ ಬೇರನ್ನೇ ಅಲ್ಲಾಡಿಸುತ್ತಿರುವುದು ಕಂಡುಬಂತು. ಕ್ರೈಸ್ತಧರ್ಮದವರು ಭಾರತೀಯ ಧರ್ಮ ಹಾಗೂ ದೇವರ ಕಲ್ಪನೆಗಳನ್ನು ಅಪಹಾಸ್ಯ ಮಾಡತೊಡಗಿದರು, ಮೂರ್ತಿ ಪೂಜೆ ನಿಷ್ಪ್ರಯೋಜಕವೆಂದು ಸಾರತೊಡಗಿದರು; ಪ್ರತಿಯೊಂದನ್ನೂ ಪರೀಕ್ಷೆಗೆ ಒಡ್ಡದೆ ಸ್ವೀಕರಿಸಬಾರದು; ಲೋಕಘಟನೆಗಳಿಗೆ ಪ್ರಾಕೃತಿಕ ನಿಯಮಗಳೇ ಕಾರಣವಾದ್ದರಿಂದ ಅಲೌಕಿಕ, ಅಪ್ರಾಕೃತಿಕವಾದ ದ್ದೆಲ್ಲವೂ ತಿರಸ್ಕಾರಯೋಗ್ಯವಾದವುಗಳು – ಎಂಬಿವೇ ವೈಚಾರಿಕ ತುಮುಲಗಳ ನಡುವೆ ಅಂದಿನ ಬದುಕು ಸಂದೇಹಗ್ರಸ್ತವಾಯಿತು. ಈ ಹಿನ್ನೆಲೆಯಲ್ಲಿ ನರೇಂದ್ರನು ಸತ್ಯಾನ್ವೇಷಿಯಾಗಿ ವಿಚಾರ ಮಾಡಿದ ಪ್ರಶ್ನೆಗಳೆಂದರೆ,

**೧. ಈ ಪಾಂಚಭೌತಿಕವಾದ ಜಗತ್ತಷ್ಟೆ ಸತ್ಯವೆ?**

**೨. ಈ ಮಾನವ ಜೀವನದ ಉದ್ದೇಶವೇನು?**

**೩. ಈ ಜಗತ್ತಿಗೆ ಹಿನ್ನೆಲೆಯಾಗಿ ಈಶ್ವರನಿರುವುದು ನಿಜವೆ?**

**೪. ಆತನಿರುವುದು ನಿಜವಾದರೆ ನಾನು ನೋಡಬಹುದೆ?**

ಎಳೆಯಂದಿನ ಕುತೂಹಲ ಈಗ ಆಧ್ಯಾತ್ಮಿಕ ವಿಚಾರದಾಹ ವಾಯಿತು. ಅದಕ್ಕಾಗಿ ಬ್ರಾಹ್ಮ ಸಮಾಜವನ್ನು ಸೇರಿದ. ಸಮಾಧಾನ ವಾಗಲಿಲ್ಲ. ಮಹರ್ಷಿ ದೇವೇಂದ್ರನಾಥ ಟ್ಯಾಗೋರರನ್ನು ಕೇಳಿದ. ಉತ್ತರ ಸಿಗಲಿಲ್ಲ. ಕಡೆಗೆ ದಕ್ಷಿಣೇಶ್ವರದ ದಿಕ್ಕಿಗೆ ಅವನ ಇಂಗ್ಲಿಷ್ ಪ್ರೊಫೆಸರ್ ಒಬ್ಬರು ಕೈತೋರಿಸಿದರು.

ದೇವಸ್ಥಾನದಲ್ಲಿದ್ದೂ ದೇವಸ್ಥಾನವನ್ನು ಮೀರಿದ, ವಿಗ್ರಹಾ ರಾಧನೆಯ ಮೂಲಕ ಅದನ್ನೂ ಮೀರಿದ, ಹಿಂದೂ ಧರ್ಮದಲ್ಲಿದ್ದೂ ಅದನ್ನು ಮೀರಿದ ಮಹಾವ್ಯಕ್ತಿ ಪರಮಹಂಸರು. ಅವರನ್ನು ಕಂಡ ನರೇಂದ್ರ ; ಬೆಳುದಿಂಗಳ ಪ್ರಶಾಂತ ರಾತ್ರಿಯನ್ನು ಗುಡುಗು ಸಿಡಿಲಿನ ಮುಂಗಾರು ಸಂಧಿಸಿದಂತಾಯಿತು; ಪುಸ್ತಕ ವಿದ್ಯೆ ಅನುಭಾವವನ್ನು ಕಂಡಂತಾಯಿತು. ನರೇಂದ್ರನ "ಮಹಾಶಯರೆ, ನೀವು ದೇವರನ್ನು ಕಂಡಿದ್ದೀರಾ?" ಎಂಬ ಪ್ರಶ್ನೆಗೆ ಪರಮಹಂಸರು ಸದೃಢವಾಣಿಯಿಂದ ಉತ್ತರಿಸಿ ನಂಬಿಕೆ ಮೂಡಿಸಿದರು.

ಪರಮಹಂಸರು ಅಂದಿನ ಹಲವರಂತೆ, ವಿಚಾರಕ್ಕೆ ವಿರೋಧ ವಾಗಿದ್ದವರಲ್ಲ. ಅವರೇ ಭಗವತಿಗೆ ಕೇಳಿದ್ದರಂತೆ, "ನನ್ನ ಸಾಕ್ಷಾ ತ್ಕಾರಗಳನ್ನು ಸಂದೇಹಿಸುವಂಥವನನ್ನು ನನ್ನ ಬಳಿಗೆ ಕಳಿಸಿಕೊಡು."

ಈ ಗುರು–ಶಿಷ್ಯ ಸ್ವೀಕಾರ ಸುಲಭವಾಗಿ ಆಗಲಿಲ್ಲ. ಅದು ಪರಸ್ಪರ ಪರೀಕ್ಷೆಗಳಿಂದ ಅಂಗೀಕೃತವಾದದ್ದು. ಅವುಗಳಲ್ಲಿ ಕೆಲವನ್ನು ಆಯ್ದು ಉದಾಹರಿಸುವುದಾದರೆ,

(ಅ) ಪರಮಹಂಸರು ನರೇಂದ್ರನಿಗೆ ಹೇಳಿದರು : "ನಾನು ಹೇಳುತ್ತೇನೆಂದು ನೀನು ಯಾವುದನ್ನೂ ಒಪ್ಪಬೇಡ. ಷರಾಫರು ನಾಣ್ಯಗಳನ್ನು ಪರೀಕ್ಷಿಸುವಂತೆ ಪರೀಕ್ಷಿಸಿ ನೋಡು."

(ಆ) ನರೇಂದ್ರನು ಮೊದಮೊದಲು ಅವರ ವಿಗ್ರಹಾರಾಧನೆ ಯನ್ನೂ, ಅತೀಂದ್ರಿಯಾನುಭವಗಳನ್ನೂ ಹಾಸ್ಯಮಾಡಿದ. ಈ ಬಗ್ಗೆ ಜಗಳವಾಯಿತು ಗುರು–ಶಿಷ್ಯರಿಗೆ. ಪರಮಹಂಸರು ಕೇಳಿ ದರು, "ನನ್ನ ಜಗನ್ಮಾತೆಯನ್ನು ಒಪ್ಪಿಕೊಳ್ಳದಿದ್ದ ಮೇಲೆ ನೀನು ಇಲ್ಲಿಗೆ ಯಾಕೆ ಬರುತ್ತೀಯಾ?" ಅದಕ್ಕೆ ನರೇಂದ್ರ ಹೇಳಿದ, "ನಾನು ಇಲ್ಲಿಗೆ ಬರುತ್ತೇನೆ ಎಂದು ಆಕೆಯನ್ನು ಒಪ್ಪಿಕೊಳ್ಳಬೇಕೇನು?"

(ಇ) ನರೇಂದ್ರ ಪರಮಹಂಸರ ಕಾಮಿನಿಕಾಂಚನ ತ್ಯಾಗವನ್ನು ಬೆಳ್ಳಿರೂಪಾಯಿಯ ನಾಣ್ಯವನ್ನು ಹಾಸಿಗೆಯಡಿ ಇಟ್ಟು ಪರೀಕ್ಷಿಸಿದ್ದ.

(ಈ) ಪರಮಹಂಸರು ಒಮ್ಮೆ ನರೇಂದ್ರನನ್ನು ಪಂಚವಟಿಗೆ ಕರೆದುಕೊಂಡು ಹೋಗಿ, "ಕಠೋರ ಸಾಧನೆಯಿಂದ ನನಗೆ ಅಣಿಮಾದಿ ಅಷ್ಟಸಿದ್ಧಿಗಳು ಪ್ರಾಪ್ತವಾಗಿವೆ. ನನಗೆ ಅವು ಬೇಕಾಗಿಲ್ಲ. ನಿನಗೆ ಕೊಡಬೇಕೆಂದು ಭಾವಿಸಿದ್ದೇನೆ. ಇದು ನಿನಗೆ ಸಮ್ಮತವೆ?" ಎಂದು ಕೇಳಿದರು.

ನರೇಂದ್ರ ಹೇಳಿದ, "ಅವುಗಳಿಂದ ಬ್ರಹ್ಮಸಾಕ್ಷಾತ್ಕಾರವಾಗುವುದೆ?"

**ಪರಮಹಂಸರು :** "ಇಲ್ಲ. ಅವುಗಳಿಂದ ಬೇರೆ ಬೇರೆ ಕೆಲಸಗಳಿಗೆ ಸಹಾಯವಾಗಬಹುದು."

**ನರೇಂದ್ರ :** "ಹಾಗಾದರೆ ನನಗೆ ಅವು ಬೇಡ. ಮೊದಲು ಈಶ್ವರ ದರ್ಶನವಾಗಲಿ."

(ಉ) ಒಮ್ಮೆ ಹಲವು ದಿನಗಳ ಕಾಲ ರಾಮಕೃಷ್ಣರು ನರೇಂದ್ರನ ಬಗ್ಗೆ ಉದಾಸೀನರಾದರು. ಅದೂ ಸುಮಾರು ಒಂದು ತಿಂಗಳ ಕಾಲ. ಆದರೂ ನರೇಂದ್ರ ದಕ್ಷಿಣೇಶ್ವರಕ್ಕೆ ಬಂದುಹೋಗುವುದನ್ನು ನಿಲ್ಲಿಸಲಿಲ್ಲ. ಈ ಬಗ್ಗೆ ಅವರೇ ಕೇಳಿದಾಗ, "ನಾನು ನಿಮ್ಮನ್ನು ಪ್ರೀತಿಸುತ್ತೇನೆ. ಕೇವಲ ನಿಮ್ಮ ಮಾತು ಕೇಳಲು ಬರುತ್ತೇನೆಂದು ಕೊಂಡಿರೇನು?" ಎಂದನು.

(ಊ) ರಾಮಕೃಷ್ಣರ ಕೊನೆಯ ದಿನಗಳಲ್ಲಿ ಅವರ 'ಅವತಾರತ್ವ' ವನ್ನು ಕುರಿತು ನರೇಂದ್ರನ ಮನಸ್ಸಿನಲ್ಲಿ ಮೂಡಿದ ಕಡೆಯ ಸಂದೇಹ ಮತ್ತು ಅದಕ್ಕೆ ರಾಮಕೃಷ್ಣರ ತಕ್ಷಣದ ಉತ್ತರ – ಹೀಗೆ ಇಂಥ ಅನೇಕ 'ಒರೆಗಲ್ಲುಗಳಲ್ಲಿ' ನರೇಂದ್ರ ರಾಮಕೃಷ್ಣರನ್ನು ಪರೀಕ್ಷಿಸುತ್ತಾನೆ. ಇಂಡಿಯಾ ದೇಶವನ್ನು ಬ್ರಿಟಿಷರು ರಾಜಕೀಯವಾಗಿ ಗೆದ್ದಾಗ ಅದೇ ಬ್ರಿಟಿಷ್ ಇಂಡಿಯಾದಿಂದ ಚಿಮ್ಮಿ ನಿಂತ ವಿವೇಕಾ ನಂದರು ತಮ್ಮ ಆಧ್ಯಾತ್ಮಿಕ ಸತ್ವದಿಂದ ಇಡೀ ಜಗತ್ತನ್ನು ಗೆದ್ದರು.

ವಿವೇಕಾನಂದರ ವಿಚಾರದ ಕಣ್ಣಿಗೆ ಮೊದಲು ಕಂಡದ್ದು – ಉಜ್ವಲ ಪರಂಪರೆಯುಳ್ಳ ಹಿಂದಿನ ಭಾರತಕ್ಕೂ, ವರ್ತಮಾನದ ಭಾರತಕ್ಕೂ ನಡುವೆಯಿದ್ದ ದೊಡ್ಡ ಕಂದರ. ಪ್ರಾಚೀನ ಭಾರತ, ಅದು ಸಾಕ್ಷಾತ್ಕರಿಸಿಕೊಂಡಂಥ ಮೌಲ್ಯಗಳು, ಅದರ ಸಾಂಸ್ಕೃತಿಕ ಇತಿಹಾಸ – ಇವೆಲ್ಲವನ್ನೂ ಸ್ವಾಮೀಜಿಯವರು ತಮ್ಮ ಸಾಂಸ್ಕೃತಿಕ ಭಾಷಾ ಸಾಹಿತ್ಯಗಳ ಅಧ್ಯಯನದ ಮೂಲಕ ರಕ್ತಗತ ಮಾಡಿಕೊಂಡು ಹೆಮ್ಮೆಪಟ್ಟಿದ್ದರು.

ಭಾರತ ಎಂದೂ ಬಾಹ್ಯ ಜಗತ್ತನ್ನು ಗೆಲ್ಲಲು ಹೊರಟಿದ್ದಿಲ್ಲ. ಅದು ಗೆದ್ದದ್ದು ಅಂತರಂಗದ ಜಗತ್ತನ್ನು. ಅದು ವೇದೋಪನಿಷತ್ತುಗಳ ಮೂಲಕ ಪಡೆದುಕೊಂಡ ಅರಿವನ್ನು ಉಜ್ವಲವಾಗಿ ಘೋಷಿಸಿ ಕೊಂಡಿದೆ. **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** : "ಪರಮಸತ್ಯ ಒಂದೇ ಅದನ್ನು ತಿಳಿದವರು ಬೇರೆಬೇರೆಯಾಗಿ ಅದನ್ನು ಹೇಳು ತ್ತಾರೆ." ಅಲ್ಲಿ ಯಾವುದೇ ಲಿಂಗ–ಭೇದ; ಜಾತಿಭೇದದ ಮಾತಿಲ್ಲ. "ಓ ಅಮೃತಪುತ್ರರೇ, ಕಿವಿಗೊಟ್ಟು ಕೇಳಿ' ಎನ್ನುತ್ತದೆ; ಮಾನವರೆಲ್ಲರೂ ಅಮೃತಪುತ್ರರು ಎನ್ನುತ್ತದೆ; **'ಸರ್ವಂ ಖಲ್ವಿದಂ ಬ್ರಹ್ಮ'** – ಈ ಎಲ್ಲವೂ ಬ್ರಹ್ಮವೇ ಅನ್ನುತ್ತದೆ; ಜಗತ್ತಿನಲ್ಲಿ ಏನೇನಿದೆಯೋ ಅದೆಲ್ಲಾ ಈಶನಿಂದ ಆವರಿಸಿದೆ (**ಈಶಾವಾಸ್ಯಮಿದಂ ಸರ್ವಂ**), ಈ ಜಗತ್ತಿನ